**ಸಾಕ್ಷಿಯನ್ನು ದಿನಾಂಕಃ 19.07.2025 ರಂದು ಕರೆದು ಪ್ರಮಾಣವಚನ ಭೋಧಿಸಲಾಯಿತು**

**ಪಾಟೀಸವಾಲು : ಆರೋಪಿ ಪರ ಶ್ರೀ ಆರ್.ಬಿ.ಆರ್. ವಕೀಲರಿಂದ.**

1. ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ನಾನು ರಿಯಲ್ ಎಸ್ಟೇಟ್ ಬ್ಯುಸಿನೆಸ್ ಮಾಡುತ್ತೇನೆ. ನಾನು ಕಛೇರಿ ಮಾಡಿಕೊಂಡಿಲ್ಲ. ನಾನು ರಿಯಲ್ ಎಸ್ಟೇಟ್ ಏಜೆನ್ಸಿಯನ್ನು ನೊಂದಾಯಿಸಿಕೊಂಡಿಲ್ಲ. ನನ್ನ ಆದಾಯದ ಮೂಲಕ ಬಾಡಿಗೆಯಿಂದ ಬರುತ್ತದೆ. ನನಗೆ ತಿಂಗಳಿಗೆ 50 ಲಕ್ಷ ಬಾಡಿಗೆ ಬರುತ್ತದೆ. ನಾನು ಕಮರ್ಷಿಯಲ್ ಕಟ್ಟಡಗಳನ್ನು ಬಾಡಿಗೆಗೆ ಕೊಟ್ಟಿದ್ದೇನೆ. ನನಗೆ ದೊಡ್ಡಕನ್ನಹಳ್ಳಿ, ಸರ್ಜಾಪುರ ರಸ್ತೆ, ವರ್ತೂರಿನಲ್ಲಿ ನೆಕ್ಸ್ಟ್ ಜನ್ ಶಾಲೆಗೆ 5 ಅಂತಸ್ತಿನ ಕಟ್ಟಡವನ್ನು ಬಾಡಿಗೆಗೆ ಕೊಟ್ಟಿದ್ದೇನೆ. ಅಲ್ಲಿ ನನ್ನ ಆಸ್ತಿಯ ವಿಸ್ತೀರ್ಣ 2 ಎಕರೆ ಇದೆ. ಸದರಿ ಆಸ್ತಿಯಿಂದ ನನಗೆ ತಿಂಗಳಿಗೆ 50 ಲಕ್ಷ ಬಾಡಿಗೆ ಬರುತ್ತದೆ. ಸದರಿ ಬಾಡಿಗೆ ಕರಾರನ್ನು ಹಾಜರು ಮಾಡಿಲು ಸಿದ್ದನಿದ್ದೇನೆ.

2. ನಾನು 2014 ಜೂನ್ ತಿಂಗಳಿನಿಂದ ಬಾಡಿಗೆಗೆ ಕೊಟ್ಟಿದ್ದೇನೆ. ನನಗೆ ಮಾರ್ಚ 2013 ಕ್ಕೂ ಮೊದಲು ನನಗೆ ಕೋರಮಂಗಲದ ಕಟ್ಟಡದಿಂದ ಬಾಡಿಗೆ ಆದಾಯ ಬರುತ್ತಿತ್ತು.       ಕೋರಮಂಗಲದಲ್ಲಿ ನಂ.14, 80 ಪೀಟ್ ರಸ್ತೆ, ಕೋರಮಂಗಲದಲ್ಲಿ ಗಂಗೋತ್ರಿ ಹೊಟೆಲ್ ಗೆ ಬಾಡಿಗೆಗೆ ಕೊಟ್ಟಿದ್ದೆ. 2008 ರಿಂದ ಬಾಡಿಗೆಗೆ ಕೊಟ್ಟಿದ್ದೆ. ಕೋರಮಂಗಲದಲ್ಲಿ 4 ಕಟ್ಟಡ ಇದೆ. ವಿಸ್ತೀರ್ಣವನ್ನು ನೋಡಿ ಹೇಳಬೇಕು ಎನ್ನುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಮಾಡಲು ಸಿದ್ದನಿದ್ದೇನೆ. ಸದರಿ ಕಟ್ಟಡದ ಬಾಡಿಗೆ ನನಗೆ ಬರುತ್ತಿತ್ತು ಎಂದು ದಾಖಲೆ ನೀಡಲು ತಯಾರಿದ್ದೇನೆ.

3. 2011 ರಿಂದ ಇಲ್ಲಿಯವರೆಗೂ ನಾನು ಆದಾಯ ತೆರಿಗೆ ಫೈಲ್ ಮಾಡಿದ್ದೇನೆ. 2011 ರಿಂದ 2014 ರ ವರೆಗಿನ ರಿಟರ್ನ್ಸ್ ಅನ್ನು ಹಾಜರು ಮಾಡಲು ನನಗೆ ಏನೂ ತೊಂದರೆ ಇಲ್ಲ ಎಂದರೆ ಸರಿ. ಆರೋಪಿಯಿಂದ 1 ಕೋಟಿ 50 ಲಕ್ಷ ಬರಬೇಕು ಎನ್ನುವುದನ್ನು ನಾನು ಐ ಟಿ ರಿಟರ್ನ್ಸ ನ ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸಿಲ್ಲ. ನನಗೆ ಯಾವುದೇ ಆದಾಯ ಇರಲಿಲ್ಲ, ಆರೋಪಿ ನನಗೆ 1 ಕೋಟಿ 50 ಲಕ್ಷ ಕೊಡಬೇಕಾಗಿಲ್ಲ ಆದಕಾರಣ ಸದರಿ ವಿಚಾರವನ್ನು ರಿಟರ್ನ ನಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕೆ ರಿಟರ್ನ ನಲ್ಲಿ ಸದರಿ ಮೊತ್ತ ತೋರಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ಆರೋಪಿ ನನಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಅವರು ನಮಗೆ ಸ್ಟೀಲ್ ಸಪ್ಲೈ ಮಾಡುತ್ತಿದ್ದರು ಎನ್ನುತ್ತಾರೆ. ಆರೋಪಿ ಅಂಗಡಿ ಇರುವ ಕಾರಣ ಹಾಗೆ ಪರಿಚಯ ಆಗಿರುತ್ತಾರೆ, ಯಾರ ಮೂಲಕವೂ ಪರಿಚಯ ಆಗಿಲ್ಲ. ಆರೋಪಿಯ ಅಂಗಡಿಯಲ್ಲಿ ಏನೇನು ಮಾರಾಟ ಮಾಡುತ್ತಾರೆ ಅದು ನನಗೆ ಗೊತ್ತಿಲ್ಲ. ನಮಗೆ ಅವರು ಸ್ಟೀಲ್ ಸಪ್ಲೈ ಮಾಡುತ್ತಿದ್ದರು ಎನ್ನುತ್ತಾರೆ. ಆರೋಪಿ 2008 ರಲ್ಲಿ ನಾನು ಒಂದು ಕಟ್ಟಡ ಕಟ್ಟಿದ್ದು ಅದಕ್ಕೆ ಸ್ಟೀಲ್ ಸಪ್ಲೈ ಮಾಡಿದ್ದರು ಆಗಿನಿಂದ ಪರಿಚಯ ಎನ್ನುತ್ತಾರೆ. 2008 ರಿಂದ ಇಲ್ಲಿಯವರೆಗೂ ಆರೋಪಿಯಿಂದ ಏನೇನು ಸಾಮಗ್ರಿ ಖರೀದಿ ಮಾಡಿದ್ದೇನೆ ಹಾಗೂ ಎಷ್ಟು ಖರೀದಿ ಮಾಡಿದ್ದೇನೆ ಎನ್ನುವುದು ನನಗೆ ನೆನಪಿಲ್ಲ.

5. ದೂರಿನಲ್ಲಿ ಆರೋಪಿ ಕಾಮನ್ ಫ್ರೆಂಡ್ ಮೂಲಕ ಹಣದ ಸಹಾಯಕ್ಕಾಗಿ ಖುದ್ದಾಗಿ ಪರಿಚಯ ಆಗಿ ಸಾಲ ಕೇಳಿದ್ದರು ಎಂದು ಹೇಳಿದ್ದು ಸದರಿ ಕಾಮನ್ ಫ್ರೆಂಡ್ ಯಾರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ನನಗೆ 1994 ರಿಂದಲೇ ಪರಿಚಯ ಇದ್ದು, ಸ್ಟೀಲ್ ಸಪ್ಲೈ ಮಾಡಿದ್ದಾರೆ ಎನ್ನುತ್ತಾರೆ. 1994 ರಿಂದಲೇ ಆರೋಪಿಗೆ ಹುಸಕೂರು ರಸ್ತೆಯಲ್ಲಿ ಅಂಗಡಿ ಇತ್ತು. ಆರೋಪಿ ಹಣ ಕೇಳಿದ ನಿಖರವಾದ ದಿನಾಂಕವನ್ನು ನನಗೆ ಹೇಳಲು ಸಾಧ್ಯವಿಲ್ಲ. ಅದು ನನಗೆ ಗೊತ್ತಿಲ್ಲ.

6. ಮೊದಲ ಬಾರಿಗೆ ನಾನು ಆರೋಪಿಗೆ ಎಷ್ಟು ಹಣ ಕೊಟ್ಟಿದ್ದೆ ಎಂದರೆ ಅದನ್ನು ನಾನು ಸ್ಟೇಟ್‌ಮೆಂಟ್ ನೋಡಿ ಹೇಳಬೇಕು ಎನ್ನುತ್ತಾರೆ. ಮುಂದಿನ ದಿನಾಂಕದಲ್ಲಿ ನಾನು ನನ್ನ ಸ್ಟೇಟ್‌ಮೆಂಟ್ ಹಾಜರು ಮಾಡುತ್ತೇನೆ. ಯಾವ ಯಾವ ಬ್ಯಾಂಕುಗಳಲ್ಲಿ ನನಗೆ ಖಾತೆ ಇದೆ ಎಂದರೆ ಸಾಕ್ಷಿ ನಾನು ನೋಡಿ ಹೇಳಬೇಕು, ಈಗ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಗೆ 1 ಕೋಟಿ 50 ಲಕ್ಷವನ್ನು ಯಾವ ಯಾವ ದಿನಾಂಕಗಳಂದು ನೀಡಿದ್ದೇನೆ ಎನ್ನುವುದನ್ನು ಹೇಳಲು ನನಗೆ ಸಾಧ್ಯವಿಲ್ಲ ಎಂದರೆ ಸಾಕ್ಷಿ ಸ್ಟೇಟ್‌ಮೆಂಟ್ ನೋಡಿ ಹೇಳಬೇಕು ಎನ್ನುತ್ತಾರೆ.

7. ಆರೋಪಿಗೆ ನಾನು ಅಕೌಂಟ್ ಮತ್ತು ನಗದು ರೂಪದಲ್ಲಿ ಹಣ ನೀಡಿದ್ದೇನೆ. ಎಷ್ಟು ಮೊತ್ತವನ್ನು ನಗದು ನೀಡಿದ್ದೆ ಎಂದರೆ ಸಾಕ್ಷಿ ನೋಡಿ ಹೇಳಬೇಕು ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ 1 ಕೋಟಿ 50 ಲಕ್ಷವನ್ನು ನಗದು ಮೂಲಕ ನೀಡಿದ್ದೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ)**

**19ನೇ ಅಪರ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್, ಬೆಂಗಳೂರು**